ಜೀಪಲ್ಲಿ ಹೋಗಿ'.

'ಸಾರ್, ಅದು ನಮ್ಮ ಜುರಿಸ್ಡಿಕ್ಷನ್ ಅಲ್ಲ ಅಲ್ವ ಸಾರ್'.

'ಆ ಕ್ರೈಮ್ ಮತ್ತು ಕ್ರಿಮಿನಲ್ ಅಮ್ಮು ಅವರ ಕೊಲೆಗೆ ಸಂಬಂಧಪಟ್ಟಿರೋದರಿಂದ ಏನು ಅಡ್ಡಿಯಿಲ್ಲ. ನಾನು ಆ ಏರಿಯಾ ಎಸ್ಐಗಳ ಜೊತೆ ಮಾತಾಡ್ತೀನಿ ಹೋಗಿ'.

ಮಾಯಣ್ಣ ತಾನು ಹೋಗದೆ ಪೇದೆಗಳನ್ನೇ ಇಂತಹ ಒಂದು ಗುರುತರವಾದ ಕಾರ್ಯಾಚರಣೆಗೆ ಇಳಿಸಿದ್ದು, ತಮ್ಮ ಮೇಲಧಿಕಾರಿಯು ತಮ್ಮ ಮೇಲೆ ಇಟ್ಟಿರುವ ಭರವಸೆ ಎಂದು ಅರಿತ ಪೇದೆಗಳ ಬದ್ಧತೆ, ಆತ್ಮವಿಶ್ವಾಸಗಳು ಇಮ್ಮಡಿಯಾಗಿತ್ತು.

'ಕುಮಾರ್, ಬೈಕ್ ತೆಗೀರಿ ಜಯಂತ್ ಹೇಳಿಕೆ ತಗೊಂಡು ಬರೋಣ'.

'ಸಾರ್ ಅವರನ್ನೇ ಇಲ್ಲಿಗೆ ಕರಸಬಹುದಲ್ವ?'

'ನಿನ್ನೆ ಭುಜಂಗನ ಹತ್ತಿರ ಹೇಳಿ ಕಳಿಸಿದ್ದಾನೆ, ಅವನಿಗೆ ಕ್ಲಿನಿಕಲ್ ಡಿಪ್ರೆಷನ್ ಆಗಿದೆಯಂತೆ. ಅಲ್ಲದೆ ಅವರಿರುವ ಜಾಗಕ್ಕೇ ಹೋದರೆ ಒಂದಷ್ಟು ಹೆಚ್ಚಿನ ಮಾಹಿತಿ ಸಿಗಬಹುದು. ಆಮೇಲೆ ನಾನು ಆಗಲೇ ಹೇಳಿದ್ದು ನೆನಪಿದೆ ತಾನೆ. ಟೋಟಲ್ ರಫ್. ಏನು?'

ಕುಮಾರ್, ಮೇಲಿಂದ ಕೆಳಗಿನ ತನಕ ಒಂದೇ ಗಾತ್ರದ, ಸ್ವಲ್ಪ ಸ್ಥೂಲಕಾಯದವನಾದರೂ ಎತ್ತರದ ಆಳಾದ್ದರಿಂದ ತಿಳಿಯುತ್ತಿರಲಿಲ್ಲ. ಯಾವುದೋ ಸರ್ಕಾರಿ ಕಚೇರಿಯ ಗುಮಾಸ್ತನಂತಿದ್ದ ಅವನಿಗೆ ಸಿಡುಕು ಮೋರೆಯೇ ಡಿಫಾಲ್ಟ್ ಸೆಟ್ಟಿಂಗ್, ಅಂಥದ್ದರಲ್ಲಿ ನಿಜವಾಗಿಯೂ ಸಿಡುಕಿದರೆ ಎಂಥವರೂ ವಿಚಲಿತರಾಗುತ್ತಿದ್ದರು.

'ಅರ್ಥ ಆಗಿದೆ ಸಾರ್'.

'ಸಾರ್, ಕ್ಲಿನಿಕಲ್ ಡಿಪ್ರೆಶನ್ ಅಂದ್ರಲ್ಲ ಅದೇನ್ ಸಾರ್?'

'ಆತಂಕ ಮತ್ತು ಖಿನ್ನತೆಯ ಮನೋರೋಗ ಅಂತೆ ಅದು. ಎಲ್ಲದರಲ್ಲೂ ನಿರಾಸಕ್ತಿ. ಸದಾ ದುಃಖಿಗಳು. ಕೋಪ, ರೋಷದ ಸಮಸ್ಯೆ. ಚಟಗಳಿಗೆ ಅಂಟಿಕೊಳ್ಳುವ ಸಾಧ್ಯತೆ. ಸಾಮಾನ್ಯವಾಗಿ ಹತ್ತಿರದವರು ತೀರಿಕೊಂಡಾಗ, ಸಂಬಂಧಗಳು ಮುರಿದು ಬಿದ್ದಾಗ, ಒತ್ತಡ ಜಾಸ್ತಿಯಾದಾಗ, ಒಂಟಿತನ ಕಾಡುವಾಗ, ಈ ಡಿಪ್ರೆಶನ್ ಅಂಟಿಕೊಳ್ಳಬಹುದಂತೆ. ಇದು ವಿಪರೀತಕ್ಕೆ ಹೋದಾಗ ಕ್ಲಿನಿಕಲ್ ಡಿಪ್ರೆಶನ್ ಅಂತಾರೆ'.

ಬೆಂಗಳೂರಿನ ಹೊರವಲಯದಲ್ಲಿ ಹೆದ್ದಾರಿಯ ಪಕ್ಕ ಸುಮಾರು ಎರಡು ಎಕರೆ ವಿಸ್ತೀರ್ಣದ 'ಸಂಧ್ಯಾ ಸೌರಭ' ಎಂಬ ಬೋರ್ಡ್ ಇದ್ದ ಈ ಜಾಗಕ್ಕೆ, ಸುತ್ತಲೂ ಎತ್ತರದ ಅಂಚು ಗೋಡೆ ಮತ್ತು ಒಂದು ದೊಡ್ಡ ಗೇಟ್ ಇತ್ತು. ಒಳಗೆ ವಯೋವೃದ್ಧರಿಗಾಗಿ ಕಟ್ಟಿದ ಸಣ್ಣ ಸಣ್ಣ ಕುಟೀರದಂತಹ ಮನೆಗಳು, ಇವುಗಳ ಮಧ್ಯೆ ಸಕಲ ನಿವಾಸಿಗಳ ಸೌಲಭ್ಯಕ್ಕಾಗಿ ಭೋಜನಾಲಯ, ವಾಚನಾಲಯ ಮತ್ತು ಇತರೆ ಚಟುವಟಿಕೆಗಳಿಗೆ ಒಂದು ದೊಡ್ಡ ಕಟ್ಟಡ. ಹಣಕಾಸಿನ ಮುಗ್ಗಟ್ಟೋ ಏನೋ, ಎಲ್ಲವೂ ಅರ್ಧಕ್ಕೇ ನಿಂತಿತ್ತು. ಆದರೆ ಗೇಟಿನಿಂದ ಸ್ವಲ್ಪ ಒಳಕ್ಕೆ, ಒಂದು ಪೂರ್ಣಗೊಂಡ ಅತಿಥಿಗೃಹ ಮಾತ್ರ ಸುಸಜ್ಜಿತವಾಗಿತ್ತು. ಸದ್ಯಕ್ಕೆ ಅದೇ

## ಕಳೆದ ಸಂಚಿಕೆಯಲ್ಲಿ



ಎಸ್ಟೇಟ್‌ನ ಮೇಲೆ ಅಧಿಕಾರ ಚಲಾಯಿಸಲು ಬಂದ ರವಿ ಹಾಗೂ ಗಣಪತಿಯ ಮೇಲೆ ಅಮ್ಮು ಮುಗಿಬಿದ್ದಳು. ಕೋವಿಯನ್ನು ಗುರಿ ಹಿಡಿದು ನಿಂತ ಅಮ್ಮು ಗಣಪತಿಯ ಕಣ್ಣಿಗೆ ಅವನ ಅಮ್ಮನಂತೆ ಕಾಣಿಸಿದಳು. ಅಯೋಮಯ ಸ್ಥಿತಿಯಲ್ಲಿ ಅಮ್ಮುವನ್ನು ಗಣಪತಿ ಎದುರಿಸಲಾಗದೆ ಹೋಗಿದ್ದ. ಕೊಡಗಿನ ಭೇಟಿಯಲ್ಲಿ ಯಾವ ಸಮಸ್ಯೆಗೂ ಸ್ಪಷ್ಟ ಉತ್ತರ ಸಿಗದೆ ಹೋದ ನಿರಾಶೆಯಲ್ಲಿ ಮಾಯಣ್ಣ ಹಿಂತಿರುಗಿದ. ಮೈಸೂರಿನ ಆಶ್ರಮ ಸೇರಿಕೊಂಡಿದ್ದ ಗಣಪತಿ, ಅಮ್ಮುವಿನ ಆಸ್ತಿ ಲಪಟಾಯಿಸಲು ರವಿ ಷಡ್ಯಂತ್ರ ರೂಪಿಸಿದ್ದನ್ನು ಹಾಗೂ ನಕಲಿ ವಿಲ್ ಸಿದ್ಧಪಡಿಸಿರುವುದನ್ನು ತಿಳಿಸಿದ. ಆ ಪಿತೂರಿಯ ಭಾಗವಾಗಿದ್ದ ತಾನು ತಪ್ಪೊಪ್ಪಿಗೆ ಪತ್ರ ಸಿದ್ಧಪಡಿಸಿಕೊಡುವುದಾಗಿಯೂ ಹೇಳಿದ. ಠಾಣೆಗೆ ಬಂದ ಚಂದ್ರನ್‌ನಿಂದಲೂ ಮಾಯಣ್ಣನಿಗೆ ಹೆಚ್ಚಿನ ವಿಷಯ ತಿಳಿಯಲಿಲ್ಲ. ಕಿತ್ತಳೆ ತೋಟದ ಕಾಂಟ್ರಾಕ್ಟ್ ಬಾಬ್ತು ಹದಿನೈದು ಲಕ್ಷ ರೂಪಾಯಿಯನ್ನು ನಗದು ರೂಪದಲ್ಲಿ ಅಮ್ಮುವಿಗೆ ಕೊಟ್ಟಿದ್ದಾಗಿ ಚಂದ್ರನ್ ತಿಳಿಸಿದ. ಆ ಹಣ ನಾಪತ್ತೆಯಾಗಿತ್ತು. ಯಲಹಂಕದ ರೈತರ ಸಂತೆಯಲ್ಲಿ ವಿನೋದ್ ಮತ್ತು ರವಿ ಕಾಣಿಸಿಕೊಂಡ ವಿಷಯ ತಿಳಿದು, ಮಾಯಣ್ಣ ಅಲ್ಲಿಗೆ ದೌಡಾಯಿಸಿದ. ರವಿಯೊಂದಿಗೆ ನಡೆದ ಸಂಘರ್ಷದಲ್ಲಿ ಮಾಯಣ್ಣನವರ ಕೈಗೆ ಗಾಯವಾಯಿತು.

ಜಯಂತನಿಗೆ ಆಶ್ರಯದಾಣವಾಗಿತ್ತು. ಒಳಹೊಕ್ಕ ಮಾಯಣ್ಣನಿಗೆ, ಅಲ್ಲೇ ಮೊಗಸಾಲೆಯಲ್ಲಿ, ಆರಾಮಕುರ್ಚಿಯಲ್ಲಿ ಕೂತು, ಬಿಯರ್ ಮಗ್ ಕೈಯಲ್ಲಿಡಿದು, ಇನ್ನೊಂದು ಕೈಯಲ್ಲಿ ಸಿಗರೇಟು ಸೇದುತ್ತಾ, ಮುಂದಿನ ಟೀಪಾಯಿಯ ಮೇಲೆ ಕಾಲು ಚಾಚಿಕೊಂಡಿದ್ದ ಜಯಂತ ಕಂಡ. ಮಾಯಣ್ಣ ಒಳಬಂದಾಗ ಅವನನ್ನೇ ನಿರೀಕ್ಷಿಸುತ್ತಿದ್ದಂತಿತ್ತು ಅವನ ಮುಖಭಾವ.

'ಬನ್ನಿ, ಎಲ್ಲಿ ಇನ್ನೂ ಬರಲಿಲ್ಲ ಅಂತಿದ್ದೆ'.

ಸಾಕಷ್ಟು ಓದಿ ಬರೆದುಕೊಂಡಂತೆ ಕಾಣುವ ಸುಶಿಕ್ಷಿತ, ಸ್ಪುರದ್ರೂಪಿ ಯುವಕ ಜಯಂತ್. ನೇರವಾಗಿ ವಿಷಯಕ್ಕೆ ಬಂದಿದ್ದ ಮಾಯಣ್ಣ.

'ಮುಂದಿನ ಅಷ್ಟೂ ಜೀವನ ಒಟ್ಟಿಗೆ ಬಾಳಬೇಕು ಅಂತಿದ್ದವರು ಕೊನೆ ಬಾರಿ ಮುಖ ನೋಡೋದಕ್ಕೂ ಬರಲಿಲ್ಲ. ನಿಮ್ಮ ಸಂಬಂಧ ಅಷ್ಟೊಂದು ಹಳಸಿತ್ತ...?'

'ತುಂಬಾನೇ... ಆದರೆ ಕೊಲೆ ಮಾಡುವಷ್ಟಲ್ಲ. ಗೊತ್ತು, ನಾನೆ ಪ್ರಮುಖ ಆರೋಪಿ ಅಂತ'.

ತಾನು ಅದರಿಂದ ವಿಚಲಿತನಾಗಿಲ್ಲ ಎಂದು ತೋರುವ ಪ್ರಯತ್ನ ಸ್ಪಷ್ಟವಾಗಿತ್ತು. ಆದರೆ ಮಾಯಣ್ಣ ಮೊದಲೇ ಜಯಂತನ ಪ್ರತಿ ನಡೆ, ಪ್ರತಿಕ್ರಿಯೆ, ಆಂಗಿಕ ಚಲನೆಗಳನ್ನು ಸೂಕ್ಷ್ಮವಾಗಿ ಗಮನಿಸಲು ಸಾಧ್ಯವಾಗುವಂತೆ ತನ್ನ ಕುರ್ಚಿಯನ್ನು ಸರಿಸಿದ್ದ. ಸತತವಾಗಿ ಪಾದಗಳು ನೆಲದಲ್ಲಿ ಬರೆದ ಏನನ್ನೊ ಅಳಿಸುವಂತೆ, ಕೈ ಬೆರಳುಗಳು ಏನೊ ಅಂಟಿದ್ದನ್ನು ತೊಡೆದುಕೊಳ್ಳುವಂತೆ, ಕುರ್ಚಿಯಲ್ಲಿ ಮುಳ್ಳೊತ್ತಿದಂತೆ ಮಿಸುಕಾಡುತ್ತಿದ್ದ ದೇಹ, ಅವನ ದುಗುಡ ಮನಸ್ಥಿತಿಯನ್ನು ಬಿಟ್ಟುಕೊಟ್ಟಿತ್ತು.

'ಜಯಂತ್, ಅಮ್ಮು ಕೊಲೆಯಾದ ದಿನ ಅಂದರೆ ಸೋಮವಾರ ಬೆಳಿಗ್ಗೆಯಿಂದ ನಿಮ್ಮ ದಿನಚರಿ ವಿವರವಾಗಿ ಒಂದೂ ಬಿಡದ ಹಾಗೆ ಹೇಳಿ'.

ಜಯಂತ್ ತಲೆ ಕೆಳಗೆ ಹಾಕಿ ಮೌನವಾಗಿಬಿಟ್ಟ.

'ಯಾಕ್ರೀ, ಸಾಯೇಬ್ರು ಕೇಳಿದ್ದು ತಿಳೀಲಿಲ್ವ, ಕೇಳಿದ್ದುಕ್ಕೆ ಥಟ್ಟಂತ ಆನ್ಸರ್ ಕೊಡ್ಬೇಕು... ಇಲ್ಲಿ ಹೋಗುಳ್ ಕೊಟ್ಕೊಂಡ್ ಇದ್ರೆ ಯಾವನುಗ್ ಟೈಮೈತೆ...'

ಅಲ್ಲಿ ತನಕ ಸುಮ್ಮನೆ ನಿಂತಿದ್ದ ಕುಮಾರ ಏರುಧ್ವನಿಯಲ್ಲಿ ಏಕಾಏಕಿ ಮೇಲೆ ಬಿದ್ದು ಜಯಂತನನ್ನು ಗಲಿಬಿಲಿ ಮಾಡಿದ್ದ. ಜಯಂತ್, ಏನಿದು ಎನ್ನುವಂತೆ, ತಲೆ ಎತ್ತಿ ಒಮ್ಮೆ ಕುಮಾರನನ್ನ ನೋಡಿ ಮತ್ತೆ ಮಾಯಣ್ಣನ ಕಡೆ ನೋಡಲು, ಮಾಯಣ್ಣ, ಕುಮಾರನನ್ನು ಸಮಾಧಾನಿಸುವಂತೆ ಕೈಸನ್ನೆ ಮಾಡಿದ.

'ಅವತ್ತು ಒಂಬತ್ತು ಗಂಟೆ ಇರಬಹುದು, ನಾನು ಅಮ್ಮು ಮನೆಗೆ ಹೋದಾಗ, ಅಮ್ಮು ಆಗ ತಾನೇ ಸ್ನಾನ ಮುಗಿಸಿ ರೆಡಿಯಾಗ್ತಾ ಇದ್ದಳು. ಸುಮಾರು ಒಂದು ವರ್ಷದ ಹಿಂದೇನೆ ಒಬ್ಬರನ್ನೊಬ್ಬರು ಇಷ್ಟಪಟ್ಟಿದ್ವಿ. ಅದನ್ನೇನು ಗುಟ್ಟು ಮಾಡಿರಲಿಲ್ಲ, ಎಲ್ಲರಿಗೂ ತಿಳಿದಿತ್ತು. ಆದರೆ ಅಲ್ಲಿ ಒಂದು ತಪ್ಪಾಗಿತ್ತು. ಮುಂದಕ್ಕೂ, ಅದೇ ಫೀಲ್ಡ್‌ನಲ್ಲಿ ಮುಂದುವರೀತಾಳೆ ಅಂದುಕೊಂಡಿರಲಿಲ್ಲ ನಾನು. ಆದರೆ ಅವಳಿಗೆ ಅದೇ ಮುಖ್ಯವಾಗಿತ್ತು, ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಆ ದಿನೇಶ್ ಜೊತೆ ಸೇರಿಕೊಂಡು ಒಂದು ಸಿನಿಮಾಗೂ ಸೈನ್ ಮಾಡಿ ಬಂದಿದ್ಲು. ನಾವು ಸ್ಥಿತಿವಂತರೇ ಇರಬಹುದು, ಆದರೆ ಸಂಪ್ರದಾಯಸ್ಥರು, ಗೌರವಸ್ಥರು, ಸ್ವೇಚ್ಛೆ ನಮಗೆ ಒಗ್ಗದ ವಿಷಯ... ಇದರ ಬಗ್ಗೆ ನಮ್ಮಿಬ್ಬರ ಮಧ್ಯೆ ಸಾಕಷ್ಟು ಜಗಳ ನಡೆದಿತ್ತು.

ಇದು ಸಾಲದು ಅನ್ನೋ ರೀತೀಲಿ ಆ ಡೈರೆಕ್ಟರ್ ದಿನೇಶ್ ಮನೇಗೆ ಹೋಗಿ ಕುಂತುಕೊಂಡಳು.